Tumbe Group of International Journals
A Multidisciplinary Journal
ISSN: 2581-8511
Issue-2
Volume-1
May-Aug: 2018

# ಶೈಕ್ಷಣಿಕ ಮನೋವಿಜ್ಞಾನದ -ಸಮೂಹದಲ್ಲಿ ಕಲಿಯುವವರ ವರ್ತನೆಗಳು

**ಡಾ. ಯೋಗೀಶ್ ಎನ್**

ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ

ಸರ್ಕಾರಿ ಪ್ರಥಮದರ್ಜೆ ಕಾಲೇಜು

ತುಮಕೂರು, ಕರ್ನಾಟಕ, ಭಾರತ

yogeesh.r@gmail.com

## ಪೀಠಿಕೆ

ಈ ಲೇಖನದಲ್ಲಿ ಸಮೂಹದಲ್ಲಿ ಕಲಿಯುವವರನ್ನು ಮನದಲ್ಲಿಟ್ಟುಕೊಂಡು ಶೈಕ್ಷಣಿಕ ಪ್ರಗತಿಗಾಗಿ ಶೈಕ್ಷಣಿಕ ಮನೋವಿಜ್ಞಾನದ ತಳಹದಿಯಲ್ಲಿ ರಚಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯ ಬಹುತೇಕ ಅವಧಿಯನ್ನು ಸಮೂಹದಲ್ಲಿ ಕಳೆಯುತ್ತಾರೆ. ಈ ಸಂಧರ್ಭದಲ್ಲಿ, ಅವರು ಅನೇಕ ಸನ್ನಿವೇಶಗಳಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಆದಕಾರಣ ಈ ಎಲ್ಲಾ ಸನ್ನಿವೇಶಗಳನ್ನು ನಿಭಾಹಿಸಲು ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಸಮೂಹದಲ್ಲಿ ಕಲಿಯುವವರ ವರ್ತನೆಗಳ ಬಗ್ಗೆ ತಿಳಿದುಕೊಳ್ಳುವುದು ಮುಖ್ಯವಾಗಿದೆ. ಹಾಗಾಗಿ ಈ ಲೇಖನದಲ್ಲಿ ಸಮೂಹದಲ್ಲಿ ಕಲಿಯುವವರ ವತನೆಗಳನ್ನು ಅರಿಯಲು ತುಂಬಾ ಉಪಯುಕ್ತವಾಗಿದೆ.

ಪ್ರಮುಖವಾಗಿ ಪೋಷಕರು, ಶಿಕ್ಷಕರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಈ ಲೇಖನ ಅತ್ಯಂತ ಪಯೋಗವಾಗಬಲ್ಲದೆಂದು ನಂಬಿರುತ್ತೇನೆ.

## ಸಮೂಹದ ಅರ್ಥ ಮತ್ತು ಸ್ವರೂಪ

ಜೀವಿಗಳಲ್ಲಿ ಕೆಲವು ಒಂಟಿಯಾಗಿ ಜೀವಿಸಿದರೆ ಬಹುತೇಕ ಪ್ರಾಣಿಗಳು ಗುಂಪುಗುಂಪಾಗಿ ವಾಸಿಸುತ್ತವೆ. ಹಾಗೆಯೇ ಮನುಷ್ಯನು ಸಹ ಗುಂಪಾಗಿ ವಾಸಿಸುತ್ತಾನೆ, ಏಕೆಂದರೆ ಇವನು ಸಂಘಜೀವಿ. ಇವನು ಹುಟ್ಟುವಾಗಲೇ ಸಮಾಜದಲ್ಲಿ ಹುಟ್ಟುವುದರಿಂದ ಇವನು ಸಮಾಜವನ್ನು ಬಿಟ್ಟು ಬದುಕಲಾರ. ಆದ್ದರಿಂದ ಇವನ್ನು ಕುಟುಂಬ, ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾನೆ. ಇವರಿಗೆ ಪ್ರತಿ ಹಂತದಲ್ಲೂ ಒಬ್ಬರಿಂದ ಇನ್ನೊಬ್ಬರಿಗೆ ಸಲಹೆ ಮಾರ್ಗದರ್ಶನ ಇತ್ಯಾದಿ ಬೇಕಾಗುತ್ತದೆ. ಹೀಗೆ ಮನುಷ್ಯ ಮನುಷ್ಯರು ಹೊಂದಾಣಿಕೆ ಮಾಡಿಕೊಂಡಿದ್ದಾನೆ.

ಹೀಗೆ ಹಲವಾರು ಸ್ತರಗಳಲ್ಲಿ ಮತ್ತು ವಿವಿಧ ಹಂತಗಳಲ್ಲಿ ಅಂದರೆ ಕುಟುಂಬ, ನೆರೆಹೊರೆ, ಸಮಾಜ ಮತ್ತು ಶಾಲೆ ಇತ್ಯಾದಿ ಸಂದರ್ಭಗಳಲ್ಲಿ ಅನೇಕ ವಿಷಯಗಳನ್ನು ಕಲಿಯುತ್ತಾನೆ, ಅದರಲ್ಲಿ ಶಾಲೆಯ ಪಾತ್ರ ದೊಡ್ಡದು. ಇಂದಿನ ಸಮಾಜ ಸಂಕೀರ್ಣವಾದುದು ಇಂತಹ ಸಂಕೀರ್ಣ ತೊಡಕನ್ನು ಬಿಡಿಸಲು ಆಸರೆಯಾಗಿ ನಿಂತಿರುವುದೇ ಶಾಲೆ. ಪ್ರತಿಯೊಂದು ಸಮಜದಲ್ಲಿ ಇಂದು ಶಾಲೆಯ ಆಶ್ರಯವನ್ನು ಅವಲಂಬಿಸಬೇಕಿದೆ. ಆದ್ದರಿಂದ ಇಂತಹ ಸನ್ನಿವೇಶದಲ್ಲಿ ಶಾಲೆಗಳಲ್ಲಿ ಉತ್ತಮ ಸಮೂಹಗಳನ್ನು ಸೃಷ್ಟಿಸಿ ಮಕ್ಕಳು ಕಲಿಕೆಯಲ್ಲಿ ಯಶಸ್ಸುಗಳಿಸಲು ದಾರಿ ಮಾಡಿಕೊಂಡಿವೆ. ಶಾಲೆ ವಿದ್ಯಾರ್ಥಿಯ

ಭಾವನೆಗಳಿಗೆ ಸ್ಪಂದಿಸುವ ಸರ್ವತೋನ್ಮುಖ ವಿಕಾಸದ ಬೆಳವಣಿಗೆಯ ಅಂಶಗಳನ್ನು ಗುರುತಿಸಲು, ಬೆಳೆಸಿಕೊಳ್ಳಲು ಗುಂಪು ನೆರವು ನೀಡುತ್ತದೆ. ಹೀಗಾಗಿ ಶಿಕ್ಷಕರು ಹಲವಾರು ಸಮೂಹದ ನೆರವು ಪಡಿಯುತ್ತಾರೆ. ಸಮೂಹದಲ್ಲಿ ತನ್ನ ಸಮಸ್ಯೆ, ಕುಂದು ಕೊರತೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಾನೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿ ಸಂಘಜೀವಿಯಾಗಿ ಬದುಕಲು ಇಚ್ಛಿಸುತ್ತಾನೆ.

**ಸಮೂಹ ಜೀವನ**

*"ಹಲವಾರು ಉದ್ದೇಶಗಳನ್ನೊಳಗೊಂಡ, ಇಬ್ಬರೂ ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪನ್ನು ಸಮೂಹ ಎನ್ನಬಹುದು"*.

ಸಮೂಹ ಜೀವನ ವ್ಯಕ್ತಿ - ವ್ಯಕ್ತಿಗಳ ನಡುವೆ ಉತ್ತಮ ಸಾಮರಸ್ಯ ಜೀವನವನ್ನು ಸಾದಿಸಲು ಸಹಾಯಕವಾಗುತ್ತದೆ. ಇಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಎಲ್ಲಾ ಹಂತದಲ್ಲಿ ಸಹಾಯವನ್ನ ಪಡೆಯುವುದಾಗಿದೆ. ಸಮೂಹ ಎಂದರೇನು ಎಂದು ಬೇರೆ ಬೇರೆ ತಜ್ಞರು ವಿವಿಧ ರೀತಿಯ ವ್ಯಾಖ್ಯಾನ ನೀಡಿದ್ದಾರೆ.

***ಮೈಕವರ್ ಮತ್ತು ಪೇಜ್***: "ವಿಶೇಷ ಸಾಮಾಜಿಕ ಸಂಬಂಧಗಳನ್ನು ಹೊಂದಿರುವ ಹಲವು ವ್ಯಕ್ತಿಗಳ ಸಂಕಲನವೇ ಸಮೂಹ".

***ಆಗ್‌ಬರ್ನ್ ಮತ್ತು ನಿಮ್‌ಕಾಪ್*** :"ಇಬ್ಬರು ಅಥವಾ ಅವರಿಗಿಂತ ಹೆಚ್ಚು ಸಂಖ್ಯೆಯ ವ್ಯಕ್ತಿಗಳು ಸೇರಿ ತಮ್ಮ ಚಟುವಟಿಕೆಗಳಲ್ಲಿ ಪರಸ್ಪರ ಪ್ರಭಾವ ಬೀರಿದಾಗ ಸಮಾಜಿಕ ಸಮೂಹವು ರಚಿತವಾಗುತ್ತದೆ".

***ಎಂ.ಸ್ಮಿತ್***:"ಒಂದೇ ಭಾವನೆಯಿಂದ ಸಾಮೂಹಿಕವಾಗಿ, ಒಂದು ಘಟಕವಾಗಿ ಕೆಲಸ ಮಾಡುವ ಶಕ್ತಿ ಮತ್ತು ಸಂಘಟನಾತ್ಮಕ ಕಾರ್ಯದಲ್ಲಿ ವರ್ತಿಸುವುದೇ ಸಮೂಹದ ಗಿತಿಶೀಲ".

***ಮ್ಯಾಗ್‌ಡೂಗಲ್*** :" ಸಮೂಹ ಎಂದರೆ ಒಟ್ಟಿಗೆ ಕೆಲಸ ಮಾಡಬೇಕು , ಒಟ್ಟಿಗೆ ಆಲೋಚೆಸಬೇಕು ಮತ್ತು ಒಟ್ಟಿಗೆ ಚಿಂತಿಸಬೇಕು" .

ಒಟ್ಟಿಗೆ ಹೇಳುವುದಾದರೆ ಸಮೂಹವೆಂದರೆ ಸಂಕುಚಿತ ಅರ್ಥದಲ್ಲಿ ಒಂದು ಗುಂಪಿನ ಜನರು ಒಂದೇ ಮನೋಭಾವ, ಉದ್ದೇಶ, ಆಚಾರ ವಿಚಾರಗಳನ್ನು ಹಾಗೂ ಆಲೋಚನೆ, ಚಿಂತನೆ ನಂಬಿಕೆಗಳನ್ನು ಹೊಂದಿದವರಾಗಿರುತ್ತಾರೆ.

**ಸಮೂಹದ ಅವಶ್ಯಕತೆ**

ಸಮೂಹವೆಂದರೆ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಮಾನ ಭಾವನೆಗಳುಳ್ಳ ವ್ಯಕ್ತಿಗಳ ಗುಂಪು ಇದು ಮನೋವಿಜ್ಞಾನದ ಒಂದು ಭಾಗವಾಗಿರುತ್ತದೆ. ಇಲ್ಲಿ ಪ್ರಜಾಸತ್ತಾತ್ಮಕ ವಾತಾವರಣವಿದ್ದು ವ್ಯಕ್ತಿಗಳು ಸಾಮರಸ್ಯದಿಂದ ಹೊಂದಿಹೊಂಡು ಜೀವಿಸುತ್ತಾರೆ. ಅಂತೆಯೇ ಶಾಲಾಸಮೂಹದಲ್ಲೂ ಕೂಡ, ಏಕೆಂದರೆ ಒಬ್ಬ ವಿದ್ಯಾರ್ಥಿಯು ತಾನು ಏಕಾಂಗಿಯಾಗಿ ಕಲಿಯುವುದಕ್ಕಿಂತ ಸಮೂಹದ ಪರಿಸರದಲ್ಲಿ ಉತ್ತಮವಾಗಿ ಕಲಿಯುತ್ತಾನೆ. ಏಕೆಂದರೆ ಅವನು ತನ್ನ ಕುಂದುಕೊರತೆಗಳನ್ನು ಇತರರಿಂದ ಬಗೆಹರಿಸಿಕೊಳ್ಳಲು ಸಹಾಯವಾಗುತ್ತದೆ. ಮತ್ತು ಯಾವುದೇ ಒಂದು ನಿರ್ಣಯವನ್ನು ಒಂಟಿಯಾಗಿ ತೆಗೆದುಕೊಳ್ಳುವುದಕ್ಕಿಂತ ಇತರರ

ಸಹಯೋಗದಿಂದ ಉತ್ತಮ ನಿರ್ಣಯ ತೆಗೆದುಕೊಳ್ಳಬಹುದು. ಅಂತೆಯೇ ಸಮೂಹದಲ್ಲಿ ವ್ಯಕ್ತಿಗೆ ಉತ್ತಮ ಮೌಲ್ಯಗಳನ್ನು ಬೆಳೆಸಬಹುದು. ಅವುಗಳೆಂದರೆ ಪ್ರೀತಿ, ವಿಶ್ವಾಸ, ಸಹನೆ, ಹೊಂದಾಣಿಕೆ, ಗೌರವಮನೋಭಾವ, ಸ್ನೇಹ ಸಹಕಾರ ಇತ್ಯಾದಿ. ಹೀಗೆ ಒಬ್ಬ ವ್ಯಕ್ತಿಯ ಸರ್ವತೋನ್ಮುಖ ಬೆಳವಣಿಗೆಗೆ ಸಮೂಹವು ಉತ್ತಮ ಪಾತ್ರವನ್ನು ವಹಿಸುತ್ತದೆ.

ಮನುಷ್ಯರು ಗುಂಪುಗುಂಪಾಗಿ ವಾಸಿಸುವುದರಿಂದ ಮಾನವನು ಸಮಾಜ ಜೀವಿಯಾಗಿ ಅನಾದಿ ಕಾಲದಿಂದಲೂ ಅವನು ಹಲವಾರು ಚಿಕ್ಕ, ದೊಡ್ಡ, ಸಾಧಾರಣ, ಔಪಚಾರಿಕ, ಅನೌಪಚಾರಿಕ ಸಮೂಹ ಅಥವಾ ಗುಂಪುಗಳನ್ನು ಸ್ಥಾಪಿಸಿಕೊಂಡಿದ್ದಾನೆ. ಇಲ್ಲಿ ಅನೇಕ ಪ್ರಯೋಜನವನ್ನು ಕಾಣಬಹುದು. ಸಮೂಹವು ಒಬ್ಬ ವ್ಯಕ್ತಿ ತನ್ನ ಪ್ರಾಥಮಿಕ ಹಾಗೂ ಮನೋವೈಜ್ಞಾನಿಕ ಅವಶ್ಯಕತೆಗಳೆಲ್ಲವನ್ನು ಪೂರೈಸಿಕೊಳ್ಳಲು ಸಹಾಯ ಮಾಡುತ್ತದೆ. ಸಮೂಹ ಪ್ರಯತ್ನ ಹಾಗೂ ಅಲ್ಲಿನ ಪ್ರಕ್ರಿಯೆಗಳಿಂದಲೇ ಸಮಾಜವು ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗೈದಿದೆ. ಸಹಜವಾಗಿಯೇ ಚಿಕ್ಕ ಮಕ್ಕಳೂ ಸಹ ಆಟದ ಗುಂಪುಗಳಾಗಿ ತಮ್ಮ ತಮ್ಮ ಸಮೂಹವನ್ನು ರಚಿಸಿಕೊಳ್ಳುತ್ತಾರೆ.

ಸಮೂಹಗಳು ಅನೇಕ ವಿಧಗಳಾಗಿರಬಹುದು ಅವುಗಳೆಂದರೆ ಕುಟುಂಬ (ಪ್ರಾಥಮಿಕ ಸಮೂಹ), ಆಟದಗುಂಪುಗಳು, ಗ್ರಾಮ ಸಮೂದಾಯ ಹಾಗೂ ಅನುಷಂಗಿಕವಾದ (ದ್ವಿತೀಯ) ವಿಶೇಷ ಆಸಕ್ತಿ ಆಧಾರಿತ ಸಮೂಹಗಳಾದ ಸಂಘ ಸಂಸ್ಥೆಗಳು ಯಾವುದೇ ವಿಧದ ಸಮೂಹವಾದರೂ ಅದು ತನ್ನದೇ ಆದ ಕೆಲವು ಲಕ್ಷಣಗಳನ್ನು ಹೊಂದಿರುತ್ತದೆ. ಸಮೂಹವು ಜನಸಂದಣಿಗಿಂತ ಭಿನ್ನವಾಗಿರುತ್ತದೆ. ಜನಸಂದಣಿಯು ಯಾವುದೇ ರೀತಿಯಲ್ಲಿ ಪರಸ್ಪರರಲ್ಲಿ ಮನೋವೈಜ್ಞಾನಿಕ ಸಂಬಂಧವಿಲ್ಲದ ಜನರ ಗುಂಪಾಗಿದೆ.

ಉದಾಹರಣೆಗೆ ಅಪಘಾತ ಸ್ಥಳದಲ್ಲಿ ನೆರೆದಿರುವ ಜನರ ಗುಂಪು, ಮಾರುಕಟ್ಟೆಯಲ್ಲಿರುವ ಜನರ ಗುಂಪು ಮತ್ತು ಜಾತ್ರೆಗಳಲ್ಲಿನ ಜನರ ಗುಂಪು ಇಷ್ಟೂ ಗುಂಪು ಸಮೂಹವಾಗುವುದಿಲ್ಲ.

**ಜನಸಂದಣಿ (Crowd)**

"ಒಂದು ಗುಂಪಿನ ವ್ಯಕ್ತಿಗಳಲ್ಲಿ ಪರಸ್ಪರ ಮನೋವೈಜ್ಞಾನಿಕ ಮತ್ತು ವಿಶೇಷ ಸಾಮಾಜಿಕ ಸಂಬಂಧ ಹೊಂದಿರದ ಆ ಗುಂಪಿಗೆ ಜನಸಂದಣಿ ಎನ್ನುತ್ತೇವೆ" .

**ಸಮೂಹದ ಲಕ್ಷಣಗಳು**

ಹೆಚ್ಚಿನ ಜನರ ಗುಂಪಿನಿಂದ ಕೂಡಿರುವ ಸಮೂಹದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಇರುತ್ತದೆ.

1. ಸಮೂಹಕ್ಕೆ ತನ್ನದೇ ಆದ ನಾಯಕತ್ವದ ನಮೂನೆ ಇದ್ದು ಒಬ್ಬ ಉತ್ತಮ ನಾಯಕನಿರುತ್ತಾನೆ.
2. ತೀರ್ಮಾನ ಕೈಗೊಳ್ಳುವಾಗ ಎಲ್ಲರೂ ಚರ್ಚಿಸಿದ್ದರೂ ನಾಯಕನಿಗೆ ತೀರ್ಮಾನ ಕೈಗೊಳ್ಳುವ ಅಧಿಕಾರ ನೀಡಿರುತ್ತಾರೆ.
3. ಸಮೂಹದ ಎಲ್ಲಾ ಸದಸ್ಯರೂ ಸಾರ್ವತ್ರಿಕ ಧ್ಯೇಯಗಳನ್ನು ಹೊಂದಿರುತ್ತಾರೆ.
4. ಸಮೂಹದಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ಸೂಕ್ತ ಸ್ಥಾನವಿರುತ್ತದೆ.
5. ಪ್ರತಿಯೊಬ್ಬ ಸದಸ್ಯನೂ ಸಮೂಹದಲ್ಲಿ ತನ್ನದೇ ಆದ ಪಾತ್ರ ನಿರ್ವಹಿಸುತ್ತಾನೆ.

6. ಸಮೂಹದಲ್ಲಿ ಸದಸ್ಯರ ನಡುವೆ ಅನ್ಯೋನ್ಯ ಸಂಬಂಧಕ್ಕೆ ಅವಕಾಶವಿರುತ್ತದೆ.
7. ಸಮೂಹದಲ್ಲಿನ ಸದಸ್ಯರ ಅನಿಯಮಿತ ವರ್ತನೆಗಳನ್ನು ನಿಯಂತ್ರಿಸಲು ಅವರಿಂದಲೇ ನಿರ್ಮಿತ ನಿಯಮಾವಳಿಗಳಿರುತ್ತವೆ.
8. ಒಂದು ಸಮೂಹದಿಂದ ಇತರ ಸಮೂಹಗಳೊಡನೆ ಅಂತರ ಸಂಬಂಧ ಬೆಳೆಸಲು ಅವರದೇ ಆದ ವಿಧಿ ವಿಧಾನಗಳು ಇರುತ್ತವೆ.
9. ಸಮೂಹದ ಸದಸ್ಯರೆಲ್ಲರೂ ಸಮಾನ ಮನಸ್ಕರು.
10. ಸಮೂಹದ ಸದಸ್ಯರೆಲ್ಲರೂ ತಮ್ಮ ನಾಯಕನ ಆಯ್ಕೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.
11. ಸಮೂಹದಲ್ಲಿ ಸಮಾಜದ ಹಿತದೃಷ್ಟಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.
12. ಸಮೂಹದಲ್ಲಿ ಸದಸ್ಯರು ಒಂದೆಡೆ ಸೇರಿ ಚರ್ಚಿಸಲು ಪೂರ್ವೋಚಿತವಾಗಿ ಸ್ಥಳ ಮತ್ತು ಕಾಲವನ್ನು ನಿಗಧಿಗೊಳಿಸಲಾಗುತ್ತದೆ.
13. ಪ್ರತಿಯೊಬ್ಬ ಸದಸ್ಯರಿಗೂ ಮತ್ತು ಆ ಗುಂಪಿಗೆ ಕೆಲವು ಅನುಕೂಲಗಳಿದ್ದು ಅಧಿಕಾರಗಳೂ ಇರುತ್ತವೆ.
14. ವೈಯಕ್ತಿಕ ಆಸಕ್ತಿಗಳನ್ನು ದೂರಮಾಡಿ ಸಾಮೂಹಿಕ ಮತ್ತು ಸಾಮಾಜಿಕ ಅಂಶಗಳಿಗೆ ಮನ್ನಣೆ ನೀಡಲಾಗುತ್ತದೆ.

ಈ ಮೇಲಿನ ಎಲ್ಲಾ ಹಂಶಗಳಿರುವ ಸಮೂಹವು ಒಂದು ಉತ್ತಮ ಸಮೂಹವಾಗುತ್ತದೆ ಇಲ್ಲದಿದ್ದರೆ ಆ ಸಮೂಹ ತನ್ನ ಅಸ್ಥಿತ್ವವನ್ನು ವಿವಿಧ ಕಾರಣಗಳಿಂದ ಕಳೆದುಕೊಳ್ಳುತ್ತದೆ.

**ಸಮೂಹವಾಗಿ ತರಗತಿ**

ಒಂದು ಶಾಲೆಯನ್ನು ತೆಗೆದುಕೊಂಡರೆ ಅದು ಸಮೂಹದ ಎಲ್ಲಾ ಗುಣಲಕ್ಷಣಗಳನ್ನು ಹೊಂದಿದೆ ಆದ್ದರಿಂದ ಶಾಲೆ ತರಗತಿಯನ್ನೂ ಮನೋವೈಜ್ಞಾನಿಕ ಸಮೂಹ ಎನ್ನಬಹುದು. ಶಾಲೆಯು ಒಂದು ಸಂಕ್ಷಿಪ್ತಸಮಾಜ, ಜಗತ್ತಿನ ಆದರ್ಶಗಳ ಸಾರ ಸಂಗ್ರಹ, ಪಡಿಯಚ್ಚು, ಪ್ರತಿಮೆಯಾಗಿರುವುದರಿಂದ ಸಮೂಹದ ತತ್ವಗಳನ್ನು ತರಗತಿ ಮತ್ತು ಶಾಲೆಗೆ ಅನ್ವಯಿಸಬೇಕು. ಆದ್ದರಿಂದ ಶಾಲೆಯು ವೈಯಕ್ತಿಕ ವರ್ತನೆಯಿಂದ ವೆತ್ಯಾಸವಾಗಿ ಸಮಾಜಿಕ ಸಮೂಹವಾಗಿ ವರ್ತಿಸುತ್ತದೆ.

ಶಾಲೆಯು ವಿದ್ಯಾರ್ಥಿಗಳಿಗೆ ಸಾಮಾಜಿಕ ತರಬೇತಿಯನ್ನು ಕೊಟ್ಟು ಜವಾಬ್ದಾರಿಯುತ ಭಾವಿ ಪೌರರನ್ನಾಗಿ ಮಾಡುತ್ತದೆ. ಸಹಕಾರ, ಸಹನೆ, ಪರಸ್ಪರ ಅನುಕಂಪ, ಔದಾರ್ಯ, ಸಾಮಾಜಿಕ ಸಾಮರಸ್ಯ, ಶಾಲೆಯ ಮತ್ತು ರಾಷ್ಟ್ರದ ಬಗ್ಗೆ ಪ್ರೀತ್ಯಾದರಗಳು ಬೆಳೆದು ಮುಂದೆ ಯೋಗ್ಯ, ಸಮರ್ಥ, ಸುಜ್ಞಾನಿ ಪೌರರುಗಳು ತಳಹದಿಯನ್ನು ಹಾಕಿಕೊಡುತ್ತದೆ. ಶಾಲೆಯು ಸಮಾಜದ ಕೇಂದ್ರವಾಗಿದ್ದು ಸಾಮಾಜಿಕ ಗುರಿಯನ್ನು ಮುಟ್ಟುವಲ್ಲಿ ಹಲವಾರು ಉದ್ದೇಶಗಳನ್ನು ನೆರವೇರಿಸುತ್ತದೆ. ಮಕ್ಕಳು ಒಬ್ಬರೊಬ್ಬರು ಅರ್ಥ ಮಾಡಿಕೊಂಡು ಉತ್ತಮ ಮನೋಭಾವವನ್ನು ಹೊಂದುವಂತೆ ನಾಯಕ ಅಥವಾ ಶಿಕ್ಷಕ ಸರಿಯಾದ ವಾತಾವರಣವನ್ನು ನಿರ್ಮಾಣ ಮಾಡಬೇಕು. ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಉಂಟುಮಾಡಬೇಕು. ಆದರೆ ಅದು ಸೌಹಾರ್ಧಯುತವಾಗಿರಬೇಕು. ನಾಯಕ ಮತ್ತು ಸದಸ್ಯರುಗಳ ಬಾಂಧವ್ಯ ಉತ್ತಮ ಮಟ್ಟದಿಂದ ಕೂಡಿರಬೇಕು. ವೈಜ್ಞಾನಿಕ ಮನೋಭಾವನೆಯನ್ನು ಮಕ್ಕಳಲ್ಲಿ ಉಂಟುಮಾಡಬೇಕು.

## ಸಮೂಹವಾಗಿ ತರಗತಿಯ ಪ್ರಾಮುಖ್ಯತೆ

ಈಗಾಗಲೇ ನಾವು ಸಮಾಜದಲ್ಲಿ ಶಾಲೆಯೂ ಕೂಡ ಒಂದು ಸಮೂಹ ಎಂದು ಒಪ್ಪಿಕೊಂಡಿದೇವೆ. ಇಲ್ಲಿ ವಿವಿಧ ಸಾಮಾಜಿಕ ಹಾಗೂ ಕೌಟುಂಬಿಕ ಹಿನ್ನೆಲೆಯನ್ನೊಳಗೊಂಡ ವಿದ್ಯಾರ್ಥಿಗಳಿರುತ್ತಾರೆ. ಆ ವಿದ್ಯಾರ್ಥಿಗಳ ಗುಂಪಿನಲ್ಲಿ ನಾವು ವ್ಯಕ್ತಿ ಭಿನ್ನತೆಗಳನ್ನು ಕಾಣುತ್ತೇವೆ. ಏಕೆಂದರೆ ಒಬ್ಬೊಬ್ಬ ವಿದ್ಯಾರ್ಥಿಯ ಅಭಿರುಚಿ, ಆಸಕ್ತಿ, ಮನೋವೃತ್ತಿಗಳೂ ಹಾಗೂ ವಿಭಿನ್ನ ವರ್ತನೆಗಳಲ್ಲಿ ಭಿನ್ನವಾಗಿರುತ್ತವೆ. ಶಿಕ್ಷಕನು ತರಗತಿಯ ನಾಯಕ ಇವರು ಇಲ್ಲಿ ಎಲ್ಲರ ಭಾವನೆಗಳಿಗೆ ಸ್ಪಂದಿಸಿ ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳುವವನು.

ಹಾಗಾಗಿ ತರಗತಿ ಸಮೂಹದ ಪ್ರಾಮುಖ್ಯತೆಯನ್ನು ಈ ಕೆಳಗಿನಂತೆ ಹೇಳಬಹುದು.

1. ಸಾಮಾಜಿಕ ಸಾಂಘಿಕ ಜೀವನಕ್ಕೆ ತರಗತಿಯ ಸಮೂಹ ಜೀವನವು ತಳಹದಿಯಾಗುತ್ತದೆ.
2. ಇದು ಸಾಮಾಜಿಕ ಸಮೂಹದ ಬಗ್ಗೆ ಎಲ್ಲಾ ತರಹದ ತಿಳುವಳಿಕೆಯ ಜ್ಞಾನವನ್ನು ನೀಡುತ್ತದೆ.
3. ತರಗತಿ ಒಂದು ಸಮೂಹವಾದ್ದರಿಂದ, ಸಮೂಹದ ಸದಸ್ಯರಾದ ವಿದ್ಯಾರ್ಥಿಗಳ ವರ್ತನೆಗಳ ಸಂಪೂರ್ಣ ಮಾಹಿತಿ ತಿಳಿಯಬಹುದು.
4. ತರಗತಿಯ ಸಮೂಹದ ಪ್ರತೀ ವಿದ್ಯಾರ್ಥಿಯ ಸಮೂಹದೊಂದಿಗಿನ ಬಾಹ್ಯ ಮತ್ತು ಆಂತರಿಕ ಸಹಸಂಬಂದವನ್ನು ತಿಳಿಯಲು ಸಹಾಯವಗುತ್ತದೆ.
5. ಸಮೂಹದಲ್ಲಿನ ವಿಭಿನ್ನ ವಿದ್ಯಾರ್ಥಿಗಳ ವಿಭಿನ್ನ ಪ್ರತಿಭೆಗಳನ್ನು ಗುರುತಿಸಿ ಬಳಸಿಕೊಳ್ಳಲು ಶಿಕ್ಷಕರಿಗೆ ಉಪಯುಕ್ತವಾಗುತ್ತದೆ.
6. ವಿದ್ಯಾರ್ಥಿಗಳು ಸಮೂಹದಲ್ಲಿ ಧನಾತ್ಮಕ ಸ್ಪರ್ಧಾಮನೋಭಾವದಿಂದ ಕಲಿಯುವುದರಿಂದ ಉತ್ತಮ ಸಮಾಜ ನಿರ್ಮಿಸಲು ಸಹಾಯಕವಾಗುತ್ತದೆ.
7. ವಿದ್ಯಾರ್ಥಿಗಳಲ್ಲಿ ತಾವೆಲ್ಲರೂ ಒಂದೇ ಶಾಲಾ ಸಮೂಹದ ಸದಸ್ಯರುಗಳು ಎಂಬ ಭಾವನೆಯಿಂದ ಉತ್ತಮ ಮನೋಭಾವ ಬೆಳೆದು ಮುಂದೆ ರಾಷ್ಟ್ರೀಯ ಭಾವೈಕ್ಯತೆಗೆ ಆದ್ಯತೆ ನೀಡುತ್ತದೆ.
8. ವಿದ್ಯಾರ್ಥಿಗಳ ನಡುವೆ ಉತ್ತಮ ಸಂವಹನ ನಡೆದು ಒಳ್ಳೆಯ ಭಾವನೆ, ತಾಳ್ಮೆ, ಸಹಕಾರ ಮತ್ತು ಹೊಂದಾಣಿಕೆ ಮನೋಭಾವ ಉಂಟಾಗುತ್ತದೆ.
9. ಸಮೂಹದಲ್ಲಿ ಸಹಾನುಭೂತಿ, ಅನುಕರಣೆ, ಪ್ರೀತಿ, ಔದಾರ್ಯ ಮತ್ತು ತ್ಯಾಗ ಇತ್ಯದಿಗಳಿಗೆ ಇರುವ ಮನ್ನಣೆಗಳ ಬಗ್ಗೆ ತಿಳಿಯುತ್ತದೆ. ವ್ಯಕ್ತಿಗಳು ಮತ್ತು ಸಮೂಹದ ಅನ್ಯೋನ್ಯ ಸಂಬಂಧ ಮತ್ತು ನಡುವಿನ ಪ್ರಭಾವದ ಬಗ್ಗೆ ತಿಳಿಯುತ್ತದೆ.

## ತರಗತಿಯಲ್ಲಿ ಸಮೂಹ ಸಂಬಂಧಗಳು

ಸಮೂಹ ಸದಸ್ಯರ ಪರಸ್ಪರ ಅನ್ಯೋನ್ಯ ಕ್ರಿಯೆಯ ಪರಿಣಾಮವಾಗಿ ಸಂವೇಗಾತ್ಮಕ ಘಟಕವನ್ನು ಒಳಗೊಂಡ ವತಾವರಣವೊಂದು ವಿರ್ಮಾಣವಾಗುತ್ತದೆ. ತರಗತಿಯಲ್ಲಿ ಸಮೂಹ ಸಂಬಂಧಗಳು ಉತ್ತಮ ವಾತಾವರಣವನ್ನು ನಿರ್ಮಾಣ ಮಾಡುವಂತಿರಬೇಕು. ತರಗತಿಯಲ್ಲಿ ಶಿಕ್ಷಕ ಉತ್ತಮ ಸಂಬಂಧವನ್ನು ಹೊಂದಿದಾಗ ಮಾತ್ರ ಮಕ್ಕಳ ಕಲಿಕಾ ಮಟ್ಟ ಹೆಚ್ಚುತ್ತದೆ. ತರಗತಿಯೆಂಬ ಸಮೂಹವು ಶಿಕ್ಷಕ ಕೇಂದ್ರಿತವಾಗಿರಬೇಕು. ತರಗತಿಯಲ್ಲಿ ಪ್ರತಿಯೋರ್ವನ ಕರ್ತವ್ಯ, ಹೊಣೆಗಾರೆ, ಕಲಿಸಬೇಕಾದ ವಿಷಯ ಮುಂತಾದವುಗಳನ್ನು ಶಿಕ್ಷಕನೇ ನಿರ್ಣಯಿಸುವ ವಿಧಾನವು ಶಿಕ್ಷಕ ಕೇಂದ್ರಿತ

ವಿಧಾನವೆನಿಸುತ್ತದೆ. ಅಧ್ಯಯನ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಹೆಚ್ಚು ಕ್ರಿಯಾಶೀಲರಾಗಿ ಭಾಗವಹಿಸುವಂತೆ ಮಾಡಬೇಕು. ಶಿಕ್ಷಕನು ನಿರ್ಧಿಷ್ಟ ವಿಷಯಗಳನ್ನು ಕಲಿಸುವುದಕ್ಕಿಂತ ಆ ವಿಷಯವನ್ನು ಹೇಗಿ ಕಲಿಯಬೇಕು ಎಂಬುದನ್ನು ಮಕ್ಕಳಿಗೆ ಕಲಿಸಿದರೆ ಆಗ ವಿದ್ಯಾರ್ಥಿಗಳು ಸ್ವಪ್ರಯತ್ನದಿಂದ ಕಲಿಯುವರು. ಎಲ್ಲಾ ಸಮೂಹಗಳಲ್ಲಿ ಸದಸ್ಯರು ಪರಸ್ಪರ ಹಾಗೂ ಸಹಾನುಭೂತಿಯಿಂದ ತಮ್ಮ ಚಟುವಟಿಕೆಗಳಲ್ಲಿ ಮಗ್ನರಾಗಿದ್ದರೆ ಮತ್ತೆ ಕೆಲವು ಸಮಯಗಳಲ್ಲಿ ಇದಕ್ಕೆ ತದ್ವಿರುದ್ದವಾಗಿ ಒಬ್ಬರನ್ನೊಬ್ಬರು ದೋಷಾರೋಪದಲ್ಲಿ ತೋಡಗುತ್ತಾರೆ.

ಸಮೂಹದ ಸದಸ್ಯರ ಈ ಉತ್ಸಾಹ ಅಥವಾ ಈ ನಿರುತ್ಸಾಹಕ್ಕೆ ಕಾರಣವಾಗುವ ಅನೇಕ ಅಂಶಗಳಿವೆ. ಅವುಗಳೆಂದರೆ ಸಮೂಹದ ರಚನೆಯ ನಮೂನೆ, ನಾಯಕತ್ವ, ಸಂವಹನ ಮತ್ತು ಅನ್ಯೋನ್ಯ ಕ್ರಿಯೆಗಳು ಇವು ತರಗತಿಯ ಸಾಮಾಜಿಕ ವಾತಾವರಣದ ಮೇಲೆ ಪ್ರಭಾವ ಬೀರುವ ಬಹುಮುಖ್ಯ ಅಂಶಗಳಾಗಿವೆ. ತರಗತಿ ಸಮೂಹದಲ್ಲಿ ನಾಯಕನ ಪಾತ್ರವಿರುವ ಶಿಕ್ಷಕನಾದವನು ಉತ್ತಮ ಸಾಮಾಜಿಕ ವಾತಾವರಣ ಉಂಟುಮಾಡುವಲ್ಲಿ ಹೆಚ್ಚಿನ ಮಹತ್ವವನ್ನು ಪಡೆದಿದೆ. ಆದ್ದರಿಂದ ಪ್ರಜಾಪ್ರಭುತ್ವ ರೀತಿಯ ನಾಯಕತ್ವ ಉತ್ತಮ ಮುಕ್ತ ವಾತಾವರಣ ಸೃಷ್ಟಿಸಿ ಗುರಿ ತಲುಪಲು ಬೇಕಾದ ಉದ್ದೇಶಗಳನ್ನು ಈಡೇರಿಸುವಲ್ಲಿ ಯಶಸ್ವಿಯಾಗುತ್ತದೆ.

### ತರಗತಿಯ ಸಮೂಹ ಪ್ರಕ್ರಿಯೆಗಳು

ಒಂದು ಸಮೂಹವನ್ನು ತೆಗೆದುಕೊಂಡರೆ ಅದು ತನ್ನ ಅಸ್ತಿತ್ವವನ್ನು ಹೊಂದಿದೆ ಎಂದು ಹೇಳಬೇಕಾದರೆ. ಆ ಸಮೂಹದಲ್ಲಿ ಹಲವಾರು ಕ್ರಿಯೆ ಮತ್ತು ಪ್ರಕ್ರಿಯೆಗಳು ನಡೆಯಬೇಕು ಆಗ ಆ ಸಮೂಹವನ್ನ ನಾವು ಕ್ರಿಯಾಶೀಲ ಸಮೂಹ ಎನ್ನಬಹುದು. ಈ ರೀತಿ ಒಂದು ಸಮೂಹವಾಗಿ ತರಗತಿ ಕ್ರಿಯಾಶೀಲವಾಗ ಬೇಕಾದರೆ ಅಲ್ಲಿ ಹಲವಾರು ಪ್ರಕ್ರಿಯೆಗಳು ನಡೆಯಬೇಕಾಗುತ್ತದೆ. ಈ ಪ್ರಕ್ರಿಯೆಗಳ ಮೇಲೆ ಆ ಸಮೂಹದ ಅಸ್ತಿತ್ವವಿರುತ್ತದೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯೊಂದಿಗೆ ಸಹಸಂಬಂಧದಿಂದ ವಿವಿಧ ರೀತಿಯ ಪ್ರಕ್ರಿಯೆಗಳಲ್ಲಿ ತೊಡಗಿರುತ್ತಾನೆ. ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಕೆಲವು ಸಮೂಹದ ಅಸ್ತಿತ್ವಕ್ಕೆ ಧನಾತ್ಮಕ ಅಥವಾ ಋಣಾತ್ಮಕವಾಗಿರಬಹುದು. ಅವುಗಳಲ್ಲಿ ಪ್ರಮುಖವೆಂದರೆ ಸಹಬಾಳ್ವೆ, ಸಹಸಂಬಂಧ, ಸಹಕಾರ, ಸ್ಪರ್ಧೆ, ಸಂಘರ್ಷ, ಹೊಂದಾಣಿಕೆ, ಪ್ರಜಾಪ್ರಭುತ್ವಧೋರಣೆ.

### ಸಹಬಾಳ್ವೆ

ಸಮೂಹವಾಗಿ ತರಗತಿಯಲ್ಲಿ ವಿವಿಧ ರೀತಿಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಬೋಧಕೇತರ ವರ್ಗದವರನ್ನು ಕಾಣುತ್ತೇವೆ. ಹಾಗಾಗಿ ಇಲ್ಲಿ ತರಗತಿ ಸಮೂಹದ ಪ್ರಕ್ರಿಯೆಗಳು ಸರಿಯಾಗಿ ನಡೆಯಬೇಕಾದರೆ ಉತ್ತಮ ಸಹಬಾಳ್ವೆಯಿಂದ ಕೆಲಸ ಮಾಡಿದರೆ ಉತ್ತಮ ಕ್ರಿಯಾಶೀಲ ಸಮೂಹವನ್ನು ಹುಟ್ಟುಹಾಕಬಹುದು.

### ಸಹ-ಸಂಬಂಧ

ತರಗತಿ ಸಮೂಹದಲ್ಲಿ ವಿದ್ಯಾರ್ಥಿಗಳು ತಮ್ಮ ಪರಸ್ಪರ ಸಹಸಂಬಂಧ ಸರಿಯಾಗಿದ್ದರೆ ಅಂತರ್-ಕ್ರಿಯೆಗಳು ಉತ್ತಮಗೊಂಡು ಯಾವುದೇ ಕ್ರಿಯೆಗೆ ಉತ್ತಮ ಪ್ರತಿಕ್ರಿಯೆ ನಡೆಯುತ್ತದೆ. ಈ ರೀತಿ ಉತ್ತಮ

ಪ್ರಕ್ರಿಯೆ ಹೊಂದಿದ ಸಮೂಹ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತದೆ. ಇಲ್ಲಿ ಸಮೂಹದಲ್ಲಿ ವ್ಯಕ್ತಿ - ವ್ಯಕ್ತಿಗಳಲ್ಲಿ ಅಂತರ್ಗತ ಉತ್ತಮ ಸಹಸಂಬಂಧವಿರುತ್ತದೆ.

**ಸಹಕಾರ**

ಎಲ್ಲಿ ಉತ್ತಮ ಸಹಬಾಳ್ವೆ ಮತ್ತು ಸಹಸಂಬಂಧ ಇರುತ್ತದೆಯೋ ಆ ಸಮೂಹ ತರಗತಿಯಲ್ಲಿ ಸಹಕಾರ ಮನೋಭಾವ ಹೊಂದಿರುವ ವ್ಯಕ್ತಿಗಳು ಹೆಚ್ಚಾಗಿರುತ್ತಾರೆ. ಆಗ ಆ ಸಮೂಹ ಉತ್ತಮ ಗರಿಷ್ಠಮಟ್ಟದ ಸಾಧನೆ ಮಾಡುವಲ್ಲಿ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಆ ಸಮೂಹದಲ್ಲಿ ಅಸ್ಥಿರತೆ ಉಂಟಾಗುತ್ತದೆ.

**ಸ್ಪರ್ಧೆ**

ಒಂದು ಸಮೂಹವೆಂದರೆ ಅಲ್ಲಿ ವಿವಿಧ ಮನೋಭಾವನೆಯುಳ್ಳ ವ್ಯಕ್ತಿಗಳು ಇರುತ್ತಾರೆ. ತರಗತಿ ಸಮೂಹದಲ್ಲೂ ಇದೇ ರೀತಿ ಇರುತ್ತದೆ. ಆಗ ಅಲ್ಲಿ ವ್ಯಕ್ತಿ / ವಿದ್ಯಾರ್ಥಿಗಳು ತಮ್ಮ ಅಸ್ತಿತ್ವವನ್ನು ಹೆಚ್ಚಿಸಿಕೊಳ್ಳಲು ತಮ್ಮ ನಡುವೆಯೇ ಸ್ಪರ್ಧೆ ಏರ್ಪಡುತ್ತದೆ. ಅದು ಧನಾತ್ಮಕವಾಗಿದ್ದರೆ ಸಮೂಹದಲ್ಲಿ ಉತ್ತಮ ವಾತಾವರಣವಿರುತ್ತದೆ. ಋಣಾತ್ಮಕವಾಗಿದ್ದರೆ ಆ ಸಮೂಹ ಅಂತರ್ ವ್ಯಕ್ತಿಗತ ಸಾಮರಸ್ಯವನ್ನು ಕಳೆದುಕೊಳ್ಳುತ್ತದೆ.

**ಸಂಘರ್ಷ**

ಅಸೂಯೇ, ಋನಾತ್ಮಕ ಸ್ಪರ್ಧೆ ಮತ್ತು ಸಹಕಾರರಹಿತ ಮನೋಭಾವ ಹೊಂದಿರುವ ವ್ಯಕ್ತಿಗಳ ನಡುವೆ ಉಂಟಾಗುವ ಜಗಳವೇ ಸಂಘರ್ಷ ಇಂತಹ ಸಂಘರ್ಷಗಳಿಂದ ಸಮೂಹದ ವ್ಯಕ್ತಿಗಳ ಸಂಬಂಧಗಳು ಹಾಳಾಗಿ ಸಮೂಹದ ಅಸ್ಥಿರತೆಗೆ ಕಾರಣವಾಗುತ್ತದೆ. ಇಂತಹ ಸನ್ನಿವೇಶಗಳನ್ನು ನಾವು ತರಗತಿಯಲ್ಲೂ ಕಾಣಬಹುದು.

**ಹೊಂದಾಣಿಕೆ**

ಒಂದು ಸಮೂಹ ಅಥವಾ ವ್ಯಕ್ತಿಗಳ ಸಂಬಂಧ ಚೆನ್ನಾಗಿರಬೇಕಾದರೆ ಅಲ್ಲಿ ಹೊಂದಾಣಿಕೆ ಸರಿಯಾಗಿರಬೇಕು. ತರಗತಿ ಎಂಬ ಸಮೂಹದಲ್ಲಿ ವಿದ್ಯಾರ್ಥಿಗಳು ಹೊಂದಾಣಿಕೆ ಕಳೆದುಕೊಂಡರೆ ಆ ವ್ಯಕ್ತಿಗಳು ಉನ್ನತಿಗೆ ತೊಡಕಾಗಿ ಇಡೀ ಸಮೂಹವೇ ನಾಶವಾಗಬಹುದು. ಉತ್ತಮ ಹೊಂದಾಣಿಕೆ ಇದ್ದರೆ ಸಮೂಹದಲ್ಲಿ ಒಳ್ಳೆಯ ವಾತಾವರಣ ಸೃಷ್ಟಿಯಾಗಿ ಉತ್ತಮ ಸಮೂಹದ ಬೆಳೆವಣಿಗೆಗೆ ನಾಂದಿಯಾಗುತ್ತದೆ.

**ಪ್ರಜಾಪ್ರಭುತ್ವ ಧೋರಣೆ**

ಒಂದು ಸಮೂಹದಲ್ಲಿನ ಪ್ರತೀ ವ್ಯಕ್ತಿಯೂ ಮುಖ್ಯ ಆದ್ದರಿಂದ ಪ್ರತೀ ವ್ಯಕ್ತಿಗೂ ತನ್ನದೇ ಆದ ಭಾವನೆಗಳನ್ನ ಹಂಚಿಕೊಳ್ಳಲು ಬಿಡಬೇಕು. ಆಗ ಆ ಸಮೂಹದಲ್ಲಿ ಧನಾತ್ಮಕ ಮನೋಭಾವನೆ ಬೆಳೆದು ಸಮೂಹದ ಪ್ರತೀ ವ್ಯಕ್ತಿಯೂ ಒಳ್ಳೆಯ ಕಾರ್ಯಗಳಲ್ಲಿ ಭಾಗಿಯಾಗಿ ಉತ್ತಮ ಅಂತರ್‌ಕ್ರಿಯೆ ಏರ್ಪಟ್ಟು ಆ ಅಮೂಹ ಪ್ರಗತಿಯತ್ತ ಸಾಗುತ್ತದೆ.

**ಮಾರ್ಗದರ್ಶನ/ಸಲಹೆ/ಸೂಚನೆಗಳು**

ಮನುಷ್ಯ ಒಂದು ಬುದ್ಧಿವಂತ ಪ್ರಾಣಿ ಕಾರಣ ಮನುಷ್ಯನಲ್ಲಿ ಇತರೆ ಪ್ರಾಣಿಗಳಿಗಿಂತ ಅತ್ಯಂತ ಶೀಘ್ರ ಮತ್ತು ಉತ್ಕೃಷ್ಟ ಮಟ್ಟದ ಕಲಿಕೆ ಉಂಟಾಗುತ್ತದೆ. ಕಲಿಕೆಯನ್ನು ವಿವಿದ ಶಿಕ್ಷಣ ಪರಿಣಿತರು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಕಲಿಕೆ ಹೇಗೆ ಉಂಟಾಗುತ್ತದೆ ಎಂದು ವಿವರಿಸಿದ್ದಾರೆ.

**ತೀರ್ಮಾನ**

ಸಮೂಹ ಸದಸ್ಯರ ಪರಸ್ಪರ ಅನ್ಯೋನ್ಯ ಕ್ರಿಯೆಯ ಪರಿಣಾಮವಾಗಿ ಸಂವೇಗಾತ್ಮಕ ಘಟಕವನ್ನು ಒಳಗೊಂಡ ವತಾವರಣವೊಂದು ವಿರ್ಮಾಣವಾಗುತ್ತದೆ. ತರಗತಿಯಲ್ಲಿ ಸಮೂಹ ಸಂಬಂಧಗಳು ಉತ್ತಮ ವಾತಾವರಣವನ್ನು ನಿರ್ಮಾಣ ಮಾಡುವಂತಿರಬೇಕು. ತರಗತಿಯಲ್ಲಿ ಶಿಕ್ಷಕ ಉತ್ತಮ ಸಂಬಂಧವನ್ನು ಹೊಂದಿದಾಗ ಮಾತ್ರ ಮಕ್ಕಳ ಕಲಿಕಾ ಮಟ್ಟ ಹೆಚ್ಚುತ್ತದೆ. ಒಂದು ಶಾಲೆಯನ್ನು ತೆಗೆದುಕೊಂಡರೆ ಅದು ಸಮೂಹದ ಎಲ್ಲಾ ಗುಣಲಕ್ಷಣಗಳನ್ನು ಹೊಂದಿದೆ ಆದ್ದರಿಂದ ಶಾಲೆ ತರಗತಿಯನ್ನೂ ಮನೋವೈಜ್ಞಾನಿಕ ಸಮೂಹ ಎನ್ನಬಹುದು. ಶಾಲೆಯು ಒಂದು ಸಂಕ್ಷಿಪ್ತಸಮಾಜ, ಜಗತ್ತಿನ ಆದರ್ಶಗಳ ಸಾರ ಸಂಗ್ರಹ, ಪಡಿಯಚ್ಚು, ಪ್ರತಿಮೆಯಾಗಿರುವುದರಿಂದ ಸಮೂಹದ ತತ್ವಗಳನ್ನು ತರಗತಿ ಮತ್ತು ಶಾಲೆಗೆ ಅನ್ವಯಿಸಬೇಕು. ಆದ್ದರಿಂದ ಶಾಲೆಯು ವೈಯಕ್ತಿಕ ವರ್ತನೆಯಿಂದ ವೆತ್ಯಾಸವಾಗಿ ಸಮಾಜಿಕ ಸಮೂಹವಾಗಿ ವರ್ತಿಸುತ್ತದೆ.

ಶಾಲೆಯು ವಿದ್ಯಾರ್ಥಿಗಳಿಗೆ ಸಾಮಾಜಿಕ ತರಬೇತಿಯನ್ನು ಕೊಟ್ಟು ಜವಾಬ್ದಾರಿಯುತ ಭಾವಿ ಪೌರರನ್ನಾಗಿ ಮಾಡುತ್ತದೆ. ಸಹಕಾರ, ಸಹನೆ, ಪರಸ್ಪರ ಅನುಕಂಪ, ಔದಾರ್ಯ, ಸಾಮಾಜಿಕ ಸಾಮರಸ್ಯ, ಶಾಲೆಯ ಮತ್ತು ರಾಷ್ಟ್ರದ ಬಗ್ಗೆ ಪ್ರೀತ್ಯಾದರಗಳು ಬೆಳೆದು ಮುಂದೆ ಯೋಗ್ಯ, ಸಮರ್ಥ, ಸುಜ್ಞಾನಿ ಪೌರರುಗಳು ತಳಹದಿಯನ್ನು ಹಾಕಿಕೊಡುತ್ತದೆ. ಶಾಲೆಯು ಸಮಾಜದ ಕೇಂದ್ರವಾಗಿದ್ದು ಸಾಮಾಜಿಕ ಗುರಿಯನ್ನು ಮುಟ್ಟುವಲ್ಲಿ ಹಲವಾರು ಉದ್ದೇಶಗಳನ್ನು ನೆರವೇರಿಸುತ್ತದೆ. ಮಕ್ಕಳು ಒಬ್ಬರೊಬ್ಬರು ಅರ್ಥ ಮಾಡಿಕೊಂಡು ಉತ್ತಮ ಮನೋಭಾವವನ್ನು ಹೊಂದುವಂತೆ ನಾಯಕ ಅಥವಾ ಶಿಕ್ಷಕ ಸರಿಯಾದ ವಾತಾವರಣವನ್ನು ನಿರ್ಮಾಣ ಮಾಡಬೇಕು. ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಉಂಟುಮಾಡಬೇಕು. ಆದರೆ ಅದು ಸೌಹಾರ್ದಯುತವಾಗಿರಬೇಕು. ನಾಯಕ ಮತ್ತು ಸದಸ್ಯರುಗಳ ಬಾಂಧವ್ಯ ಉತ್ತಮ ಮಟ್ಟದಿಂದ ಕೂಡಿರಬೇಕು. ವೈಜ್ಞಾನಿಕ ಮನೋಭಾವನೆಯನ್ನು ಮಕ್ಕಳಲ್ಲಿ ಉಂಟುಮಾಡಬೇಕು.

**ಉಲ್ಲೇಖ ಪುಸ್ತಕಗಳು**


**[1].** Skinner, B. F. (1988). The selection of behavior: The operant behaviorism of B. F. Skinner. New York: Cambridge University Press.

**[2].** Tharp, R. & Gallimore, R. (1991). Rousing minds to life: Teaching, learning, and schooling in social context. Cambridge, UK: Cambridge University Press.

**[3].** Bruner, J. (1996). The culture of education. Cambridge, MA: Harvard University Press.

**[4].** Gardner, H. (2006). The development and education of the mind. New York: Routledge.

**[5].** Israel, S. (Ed.). (2005). Metacognition in literacy learning. Mahwah, NJ: Erlbaum.

**[6].** Piaget, J. (2001). The psychology of intelligence. London, UK: Routledge.

**[7].** Skinner, B. F. (1938). The behavior of organisms. New York: Appleton-Century-Crofts.